ಸಿ.ಸಿ ನಂಬ್ರಃ 1185/2023
ಪಿ.ಡಬ್ಲ್ಯೂ : 1

ದಿನಾಂಕಃ 23-01-2026 ರಂದು ಸಾಕ್ಷಿಗೆ ಪ್ರಮಾಣ ವಚನ ಮಾಡಿಸಲಾಗಿದೆ

ಪಾಟೀ ಸವಾಲು: ಆರೋಪಿ ಪರ ಶ್ರೀ ಡಿ.ಎಸ್ ವಕೀಲರಿಂದ

1. ನನಗೂ ಮತ್ತು ಆರೋಪಿತಳಿಗೆ ಚೆಕ್ ನ ವ್ಯವಹಾರ ಹೊರತು ಪಡಿಸಿ ಬೇರೆ ಯಾವುದೇ ಹಣದ ವ್ಯವಹಾರ ಇರುವುದಿಲ್ಲ. ನಾನು ಆರೋಪಿತಳಿಗೆ 2,60,000/- ರಲ್ಲಿ 1,50,000/- ಸಾಲ ಮಾಡಿ ಕೊಟ್ಟಿರುತ್ತೇನೆ. ಉಳಿದ ಹಣವನ್ನು ಇನ್ನೊಂದು ಬಾರಿ ಕೊಟ್ಟಿರುತ್ತೇನೆ. ಒಟ್ಟು ಎರಡು ಕಂತಿನಲ್ಲಿ 2,60,000/- ಕೊಟ್ಟಿರುತ್ತೇನೆ. ಎರಡು ಕಂತಿನ ಹಣವನ್ನು ನಗದಾಗಿ ಕೊಟ್ಟಿರುತ್ತೇನೆ. ಹಣ ಕೊಟ್ಟ ಬಗ್ಗೆ ನಾನು ಕರಾರು ಮಾಡಿಕೊಂಡಿರುವುದಿಲ್ಲ. ಅವರು ನನಗೆ 10 ವರ್ಷದಿಂದ ಪರಿಚಯ ಇರುತ್ತಾರೆ. ನಾನು ಹಣ್ಣಿನ ವ್ಯವಹಾರ ಮಾಡುತ್ತೇನೆ.

2. ಇಷ್ಟು ದೊಡ್ಡದ ಮೊತ್ತದ ಹಣವನ್ನು ಕೊಡುವಾಗ ನಾನು ಯಾವುದೇ ದಾಖಲೆಯನ್ನು ಮಾಡಿಕೊಂಡಿರುವುದಿಲ್ಲ. ಚೆಕ್ ನ್ನು ಆಕೆಯ ಮನೆಯಲ್ಲಿ ತೆಗೆದುಕೊಂಡಿರುತ್ತೇನೆ. ಚೆಕ್ ಕೊಡುವಾಗ ಅವರ ಗಂಡ ಅಲ್ಲಿಯೇ ಇದ್ದರು. ಅವರ ಗಂಡ ಮಕ್ಕಳನ್ನು ಬಿಟ್ಟರೆ ಬೇರೆ ಯಾರು ಸಾಕ್ಷಿದಾರರು ಇರುವುದಿಲ್ಲ. ನಾನು ಅವರ ಮನೆಗೆ ಸಂಜೆ ಸಮಯದಲ್ಲಿ ಹೋಗಿ ಬಲತ್ಕಾರವಾಗಿ ಜಗಳ ಮಾಡಿ ಚೆಕ್ ನ್ನು ತೆಗೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಆ ಚೆಕ್ ನಲ್ಲಿ ನನಗೆ ಇಷ್ಟ ಬಂದಷ್ಟು ಹಣವನ್ನು ಬರೆದು ಬ್ಯಾಂಕಿಗೆ ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ.

3. ಆರೋಪಿತಳಿಗೆ ಕೇವಲ 1,30,000/- ರೂ. ಹಣ ನೀಡಿದ್ದು ಚೆಕ್ ನಲ್ಲಿ 2,60,000/- ಅಂತ ನಾನೇ ಬರೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿತಳು ನನ್ನಿಂದ ತೆಗೆದುಕೊಂಡ ಹಣವನ್ನು ಸಂಪೂರ್ಣವಾಗಿ ಪಾವತಿ ಮಾಡಿದ್ದರೂ ಆಕೆಯಿಂದ ಹೆಚ್ಚಿನ ಹಣವನ್ನು ಪಡೆದುಕೊಳ್ಳುವ ದುರುದ್ದೇಶದಿಂದ ಈ ಪ್ರಕರಣ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಆರೋಪಿತಳಿಗೆ ಕೊಡಬೇಕಾದ ಹಣಲೋನ್ ಬಾಕಿ ಇರುತ್ತದೆ, ಬೇರೆ ಯಾವುದೇ ಲೋನ್ ಬಾಕಿ ಇರುವುದಿಲ್ಲ ಎಂದು ನುಡಿಯುತ್ತಾರೆ. ಆರೋಪಿತಳಿಂದ ಯಾವುದೇ ಹಣ ಬರಲು ಬಾಕಿ ಇರದೇ ಇದ್ದರೂ ಸಹ ಅವರ ವಿರುದ್ದ ಸುಳ್ಳು ಪ್ರಕರಣ

ದಾಖಲಿಸಿರುತ್ತೆನೆ ಎಂದರೆ ಸರಿಯಲ್ಲ. ಆ ಕಾರಣ ಯಾವುದೇ ದಾಖಲೆ ನನ್ನ ಬಳಿ ಇರುವುದಿಲ್ಲ ಎಂರದೆ ಸರಿಯಲ್ಲ.

ಮರು ವಿಚಾರಣೆ - ಇಲ್ಲ.

ಓ.ಹೇ.ಕೇ.ಸ.ಇದೆ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಗಿದೆ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಕುಂದಾಪುರ